# ಮೌಂಟ್ ರಷ್‌ಮೋರ್



■ ಚಿತ್ರಲೇಖನ: **ಪ್ರಭಾ ಪ್ರಸಾದ್**

ದಕ್ಷಿಣ ಡಕೋಟ ರಾಜ್ಯದ ಬ್ಲಾಕ್‌ಹಿಲ್ ಪರ್ವತ ಶ್ರೇಣಿಯಲ್ಲಿರುವ ಮೌಂಟ್ ರಷ್‌ಮೋರ್ ರಾಷ್ಟ್ರೀಯ ಸ್ಮಾರಕದಲ್ಲಿರುವ, ಅಮೆರಿಕಾದ ನಾಲ್ವರು ಪ್ರಸಿದ್ಧ ಅಧ್ಯಕ್ಷರ ಮುಖ ಶಿಲ್ಪಗಳು ಅತ್ಯಂತ ಪ್ರೇಕ್ಷಣೀಯ.

ದಕ್ಷಿಣ ಡಕೋಟ ರಾಜ್ಯದ ಎರಡನೇ ದೊಡ್ಡ ನಗರವಾಗಿರುವ ರ್‍ಯಾಪಿಡ್ ಸಿಟಿ ಬ್ಲಾಕ್ ಹಿಲ್‌ನ ಪೂರ್ವಭಾಗದಲ್ಲಿದೆ. ಒಣಹವೆಯ ಬಯಲು ಸೀಮೆ ರ್‍ಯಾಪಿಡ್ ನಗರ. ರ್‍ಯಾಪಿಡ್ ನಗರದ ನೈಋತ್ಯ ದಿಕ್ಕಿನಲ್ಲಿ 25 ಮೈಲಿ ದೂರದಲ್ಲಿರುವ ಕೀಸ್ಟೋನ್ ಪ್ರದೇಶದ ಮೌಂಟ್ ರಷ್‌ಮೋರ್ ರಾಷ್ಟ್ರೀಯ ಸ್ಮಾರಕವನ್ನು ನೋಡುವುದು ಒಂದು ರೋಮಾಂಚನಕಾರಿ ಅನುಭವ. ಕೀಸ್ಟೋನ್ ತಲುಪಲು ಒಂದೆರಡು ಮೈಲಿಗಳ ಅಂತರದಲ್ಲಿಯೇ ದೂರದ ಬ್ಲಾಕ್ ಹಿಲ್‌ನಲ್ಲಿ ಕೆತ್ತಿರುವ ಅಮೆರಿಕಾ ದೇಶದ ನಾಲ್ವರು ಪ್ರಸಿದ್ಧ ಅಧ್ಯಕ್ಷರ ಬೃಹತ್ ಮುಖಗಳು ಗೋಚರಿಸಿದಾಗ ರೋಮಾಂಚನವಾಯಿತು.

ಕೀಸ್ಟೋನ್ ಪ್ರದೇಶದ ಬೆಣಚು ಕಲ್ಲಿನ ಈ ಪರ್ವತ ಶ್ರೇಣಿಗಳು 'ಬ್ಲಾಕ್ ಹಿಲ್' ಎಂದೇ ಪ್ರಸಿದ್ಧವಾಗಿದೆ. ಮೌಂಟ್ ರಷ್‌ಮೋರ್ ರಾಷ್ಟ್ರೀಯ ಸ್ಮಾರಕದ ಕಲ್ಪನೆ, ದಕ್ಷಿಣ ಡಕೋಟ ರಾಜ್ಯದ ಪ್ರಸಿದ್ಧ ಇತಿಹಾಸಕಾರ ಡೋನ್ ರಾಬಿನ್‌ಸನ್‌ರ ಕನಸಿನ ಕೂಸಾಗಿತ್ತು. ಈ ಕೆಲಸಕ್ಕಾಗಿ ರಾಬಿನ್‌ಸನ್ ನೇಮಿಸಿದ್ದು ಜಾನ್ ಗುಟ್ ಜೋನ್ ಬೋರ್‌ಗ್ಲಮ್ ಎಂಬ ಶಿಲ್ಪಿಯನ್ನು. ಈತ ಡೆನ್ಮಾರ್ಕ್ ಮೂಲದವನು, ಗುಟ್ ಜೋನ್ ಅದಾಗಲೇ, ತನ್ನ ಅನೇಕ ಶಿಲ್ಪಕೃತಿಗಳಿಂದ ಹೆಸರುವಾಸಿಯಾಗಿದ್ದ. ಪ್ರಪಂಚದ ಇತಿಹಾಸ ಹಿಂದೆಂದೂ, ನೋಡಿರದ ಈ ಮಹತ್ಕಾರ್ಯಕ್ಕೆ ಗುಟ್ ಜೋನ್‌ನ ಸಹಾಯಕರಾದವರು ಇವಾನ್ ಹೌಸರ್ ಎಂಬ ಶಿಲ್ಪಿ ಮತ್ತು ಗುಟ್ ಜೋನ್‌ನ ಮಗ ಲಿಂಕನ್. ಅಮೆರಿಕಾದ ನಾಲ್ಕು ರಾಷ್ಟ್ರಪತಿಗಳ ಮುಖಗಳ ಪ್ರತಿರೂಪವನ್ನು ಬೆಟ್ಟದ ತುದಿಯಲ್ಲಿ ಕೆತ್ತುವುದು ಈ ಯೋಜನೆಯ ಉದ್ದೇಶವಾಗಿತ್ತು. ಶಿಲ್ಪಿ ಗುಟ್ ಜೋನ್, ಜಾರ್ಜ್ ವಾಶಿಂಗ್‌ಟನ್, ಥಾಮಸ್ ಜೆಫರ್‌ಸನ್, ಥಿಯೋಡೋರ್ ರೂಸ್‌ವೆಲ್ಟ್ ಮತ್ತು ಅಬ್ರಹಾಂ ಲಿಂಕನ್. ಈ ನಾಲ್ವರನ್ನು ತನ್ನ ಶಿಲ್ಪಕ್ಕಾಗಿ ಆರಿಸಿದ. ಈ ನಾಲ್ಕು ಮಹಾನ್ ವ್ಯಕ್ತಿಗಳು, ಅಮೆರಿಕಾ ದೇಶದ ಆಡಳಿತಕ್ಕೆ ಪ್ರಜಾಪ್ರಭುತ್ವದ ಶಕ್ತಿ ತುಂಬಿದವರು. ದೇಶವನ್ನು ಸರ್ವತೋಮುಖವಾದ ಅಭಿವೃದ್ಧಿ ಮತ್ತು ಪ್ರಗತಿಯತ್ತ ಮುನ್ನಡೆಸಿದವರು. ಇದು ಈ ನಾಲ್ವರ ಆಯ್ಕೆಗೆ ಮುಖ್ಯ ಕಾರಣವಾಗಿತ್ತು.

1925 ರಲ್ಲಿ ಸ್ಮಾರಕ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತ ಗುಟ್ ಜೋನ್ ಯೋಜನೆಯ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡ. 1927 ರಲ್ಲಿ ಸ್ಮಾರಕದ ಅಸಲಿ ಕೆಲಸ ಪ್ರಾರಂಭವಾಯಿತು. 400 ಕೆಲಸಗಾರರನ್ನೊಳಗೊಂಡ, ಗುಟ್ ಜೋನ್ ತಂಡವು ಡೈನಾಮೈಟ್‌ಗಳಿಂದ ಬೃಹತ್ ಬಂಡೆಗಳನ್ನು ಸಿಡಿಸಿ, ಬಂಡೆಗಳಲ್ಲಿ ರಂಧ್ರಗಳನ್ನು ಕೊರೆದು ಚಿಕ್ಕ ಚಿಕ್ಕ ಬಂಡೆಯ ಚೂರುಗಳನ್ನು ಕೈಗಳಿಂದ ತೆಗೆಯಿತು. ಈ ವಿಧಾನಕ್ಕೆ 'ಹನಿ ಕೂಮಿಂಗ್' ಎಂದು ಕರೆದರು. ಬಲಿಷ್ಠವಾದ ಹಗ್ಗಗಳಿಂದ ತೂಗಾಡುತ್ತಿದ್ದ 'ಬೋಸನ್' ಎಂಬ ವಿಶೇಷ ಕುರ್ಚಿಗಳಲ್ಲಿ ಕುಳಿತು, ಮುಖಗಳ ಆಕಾರವನ್ನು ಕೆತ್ತಿಕೊಂಡರು. ಈ ಹಂತದಲ್ಲಿ, ಮುಖಗಳ ವಿನ್ಯಾಸದಲ್ಲಿ ಅವಶ್ಯಕತೆಗನುಗುಣವಾಗಿ, ಹಲವು ಮಾರ್ಪಾಡುಗಳಾದುವು. 1934–1939ರ ಅವಧಿಯಲ್ಲಿ ಮುಖಗಳ ಕೆತ್ತನೆಯ ಕೆಲಸ ಮುಗಿದಿತ್ತು.

ಒಟ್ಟು 60 ಅಡಿಗಳ ಎತ್ತರದ ಮುಖಗಳ ಕಣ್ಣಿನ ಅಳತೆ 11 ಅಡಿಗಳೂ. ಮೂಗಿನ ಅಳತೆ, 20 ಅಡಿಗಳೂ ಬಾಯಿಯ ಅಗಲವು 18 ಅಡಿಗಳಷ್ಟಿವೆ! 14 ವರ್ಷಗಳ ಕಾಲದ ಶಿಲ್ಪದ ಕಾರ್ಯವನ್ನು ಮುಗಿಸಿ, ಶಿಲ್ಪಿ ಗುಟ್ ಜೋನ್ ಡೋನ್ ರಾಬಿನ್‌ಸನ್‌ರ ಅದ್ಭುತ ಕಲ್ಪನೆಯನ್ನು ಸಾಕಾರಗೊಳಿಸಿದ. 1941 ರಲ್ಲಿ ಗುಟ್ ಜೋನ್ ಬೋರ್ ಗ್ಲಮ್ ನಿಧನರಾದ ಕಾರಣ, ಮಗ ಲಿಂಕನ್ ಉಳಿದ ಕೆಲಸವನ್ನು ಪೂರ್ಣಗೊಳಿಸಿದ.

